ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಇದು ಬಹಳ ಪ್ರಾಮುಖ್ಯವಾದ ವಿಚಾರ ಇದೆ.

ಅಧ್ಯಕ್ಷರು: ನಾಳೆ ಉತ್ತರ ತರಿಸಿಕೊಡುತ್ತೇನೆ.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಬ್ಸಿಡಿ.

322(2073)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರದಿಂದ ಸಬ್ಸಿಡಿ ಪಡೆಯುತ್ತಿರುವ ಕೈಗಾರಿಕೆಗಳು ಯಾವುವು?

ಆ) ಇನ್ನೂ ಅನೇಕ ಕೈಗಾರಿಕೆಗಳಿಗೆ ಸಬ್ಸಿಡಿ ನೀಡಲು ಸರ್ಕಾರ ಆಲೋಚಿಸುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ ಆ ಕೈಗಾರಿಕೆಗಳು ಯಾವುವು ಮತ್ತು ಎಂದಿನಿಂದ ನೀಡಲಾಗುವುದು;

ಈ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಇದುವರೆಗೆ ಕೊಡಬೇಕಾದ ಸಹಾಯಧನದ ಬಾಕಿ ಮೊತ್ತ ಎಷ್ಟು?

ಉ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನದ ಬಾಕಿ ಎಷ್ಟು ಈ ಸಹಾಯಧನವನ್ನು ಯಾವಾಗ ನೀಡಲಾಗುವುದು?

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಸಣ್ಣ ಕೈಗಾರಿಕಾ ಸಚಿವರು):

ಅ) 1996-2001 ಕೈಗಾರಿಕಾ ನೀತಿಯ ಪ್ರಕಾರ ಪರಿಚ್ಛೇಧ-111ರಲ್ಲಿ ತಿಳಿಸಿರುವ ಕೈಗಾರಿಕಾ ಚಟುವಟಿಕೆಗಳನ್ನು ಹೊರತುಪಡಿಸಿ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಲ್ಲಿ ಸ್ಥಾಪಿತವಾಗಿರುವ ಎಲ್ಲಾ ಕೈಗಾರಿಕೆಗಳು ಸಹಾಯಧನವನ್ನು ಪಡೆಯುತ್ತವೆ.

ಆ) ಸರ್ಕಾರವು ಅನೇಕ ಕೈಗಾರಿಕೆಗಳಿಗೆ ಸಹಾಯಧನ ನೀಡಲು ಆಲೋಚಿಸುತ್ತಿದ್ದು, ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ: ಸಿಐ 30 ಎಸ್‌ಫಿಸಿ 96, ಬೆಂಗಳೂರು ದಿನಾಂಕ: 14.5.99ರ ಪ್ರಕಾರ 20 ಹೆಚ್ಚುವರಿ ಕೈಗಾರಿಕಾ ಚಟುವಟಿಕೆಗಳಿಗೆ ರಾಜ್ಯ ಸಹಾಯಧನ ನೀಡಲಾಗುತ್ತಿದೆ.

ಇ) ಆ ಕೈಗಾರಿಕೆಗಳನ್ನು ಅನುಬಂಧ-1ರಲ್ಲಿ ತೋರಿಸಲಾಗಿದೆ. 1996-2001 ಪ್ಯಾಕೇಜ್ ಅನ್ವಯ ದಿನಾಂಕ 1.4.96ರಿಂದ ಅರ್ಹವಾಗುತ್ತವೆ.

ಈ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾದ ಸಹಾಯಧನದ ಸುಮಾರು ರೂ. 71,00 ಕೋಟಿ ಬಾಕಿ ಇರುತ್ತದೆ.

ಉ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನ ಬಾಕಿ ಸುಮಾರು ರೂ. 2.96 ಕೋಟಿ ಇರುತ್ತದೆ. 1999-2000ರಲ್ಲಿ ಕೆಲವೊಂದು ಘಟಕಗಳಿಗೆ ಬಿಡುಗಡೆ ಪ್ರಯತ್ನ ಮಾಡಲಾಗುವುದು.

ಅನುಬಂಧ- 1

1. ಪ್ರಿಂಟಿಂಗ್ ಪ್ರೆಸ್/ಅಫ್ ಸೆಟ್ ಪ್ರಿಂಟಿಂಗ್
2. ಲ್ಯಾಟಿಕ್ಸ್ ಕೈಗಾರಿಕೆಗಳು
3. ಕ್ಯಾಶ್ಯೂನೆಟ್ ಶೆಲ್ ಲಿಕ್ವಿಡ್ ಎಕ್‌ಸ್ಟ್ರಾಕ್ಷನ್
4. ಸ್ಪೋನ್ ಕ್ರಷಿಂಗ್
5. ಆಟೋಮೊಬೈಲ್ ಸರ್ವೀಸಿಂಗ್
6. ರೈಸ್ ಮಿಲ್
7. ಕಾಫಿ ಕ್ಯೂರಿಂಗ್
8. ಅರೇಕಾನಟ್ ಪ್ರೊಸೆಸಿಂಗ್
9. ಫ್ಲೋರ್ ಮಿಲ್
10. ಇಂಜಿನಿಯರಿಂಗ್ ಅಸೆಂಬ್ಲಿ ಘಟಕ
11. ಎರೇಟೆಡ್ ವಾಟರ್/ ಸಾಫ್ಟ್ ಡ್ರಿಂಕ್ಸ್
12. ಮಿನರಲ್ ವಾಟರ್
13. ಸಿಎನ್ ಸಿ ಲೇತ್ ಮಿಷಿನ್
14. ಕಂಟ್ರಿಮೇಡ್ ಬ್ರಿಕ್ಸ್/ಟೇಬಲ್ ಮೌಲ್ಡೆಡ್ ಬ್ರಿಕ್ಸ್
15. ಖಾದಿ ಮತ್ತು ಗ್ರಾಮೋದ್ಯೋಗ ಸೇವಾ ಚಟುವಟಿಕೆಗಳು
16. ಎಲ್.ಪಿ.ಜಿ ಬಾಟ್ಲಿಂಗ್
17. ವೆಲ್ಕನೈಜಿಂಗ್
18. ದಾಲ್ ಮಿಲ್ಸ್
19. ಡೆಸಿಕೇಟೆಡ್ ಕೋಕನಟ್ ಕೈಗಾರಿಕೆ
20. ಪೌಲ್ಟ್ರಿ ಫಾರ್ಮ್ಸ್

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದು ಇಬ್ಬರು ಸಚಿವರಿಗೆ ಸೇರಿದಂಥ ಕೆಲವು ಪ್ರಶ್ನೆಗಳು ಇರುವುದರಿಂದ, ಮೊದಲನೇ ಪ್ರಶ್ನೆ ಏನೆಂದರೆ (ಅ)ದಲ್ಲಿ 20 ಹೆಚ್ಚುವರಿ ಕೈಗಾರಿಕಾ ಚಟುವಟಿಕೆಗಳಿಗೆ ರಾಜ್ಯಸರ್ಕಾರ ಸಹಾಯಧನ ನೀಡಲು 14-5-99ರ ಒಂದು ಆದೇಶದ ಪ್ರಕಾರ ಅವಕಾಶ ಕೊಟ್ಟಿದೆ ಎಂದು ಇದೆ. ನನ್ನ ಪ್ರಶ್ನೆ ಏನೆಂದರೆ ಎಷ್ಟು ಕೈಗಾರಿಕೆಗಳನ್ನು ಹೊಸದಾಗಿ ಈ ಸಬ್ಸಿಡಿ ಕೊಡುವಂಥ ಪಟ್ಟಿಯಲ್ಲಿ ಸೇರಿಸಬೇಕು ಎಂದು ಮನವಿಗಳು ಬಂದಿದ್ದವು? ಎಂಬುದನ್ನು ಹೇಳಬೇಕು. 20 ಕೈಗಾರಿಕೆಗಳಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದರೆ ಎಷ್ಟು ಮನವಿಗಳು ಸಬ್ಸಿಡಿ ಕೊಡಬೇಕು ಎಂದು ಬಂದಿದ್ದವು ಎಂಬುದನ್ನು ತಿಳಿಸಬೇಕು. ಏಕೆಂದರೆ ಹೆಚ್ಚಿನ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡಬೇಕು ಎನ್ನುವಂಥಾದ್ದು ಕೈಗಾರಿಕೋದ್ಯಮಿಗಳ ಅಪೇಕ್ಷೆ ಇತ್ತು. ಎರಡನೆಯದಾಗಿ, ನಮ್ಮ ಸಣ್ಣ ಕೈಗಾರಿಕೆಗಳ ಪರಿಸ್ಥಿತಿ ಏನಾಗಿದೆ ಎಂದು ನಮಗೆಲ್ಲರಿಗೂ ಗೊತ್ತಿದೆ. ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಎಷ್ಟು ಕಷ್ಟ ಅನುಭವಿಸುತ್ತಿವೆ ಎಂಬುದು ನಮಗೆ ಗೊತ್ತಿದೆ. ವಿದ್ಯುತ್ ಅಭಾವದ ತೊಂದರೆ ಒಂದು ಕಡೆಯಾದರೆ, ಸರ್ಕಾರದ ವಿವಿಧ ಇಲಾಖೆಗಳ ಕಾಟಾಚಾರದ ಸ್ಥಿತಿಯಿಂದಾಗಿ ಸಣ್ಣ ಕೈಗಾರಿಕೆಗಳು ದೊಡ್ಡ ಪ್ರಮಾಣದಲ್ಲಿ ಬಾಗಿಲನ್ನು ಹಾಕುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅವರಿಗೆ ಕೊಡಬೇಕಾದ ಸಬ್ಸಿಡಿ ಹಣ ಎಷ್ಟು ವರ್ಷಗಳಿಂದ ಬಾಕಿ ಇದೆ? 71 ಕೋಟಿ ರೂಪಾಯಿಗಳು ಬಾಕಿ ಇದೆ ಅಂತಿದೆ. ಇದು ಯಾವ ಕಾರಣಗಳಿಂದ ಬಾಕಿ ಉಳಿದಿದೆ ಮತ್ತು ಹಣ ಯಾವಾಗ ಕೊಡುತ್ತೀರಿ ಎಂದು ನಾನು ಸ್ಪಷ್ಟವಾಗಿ ಕೇಳುತ್ತೇನೆ.

ಶ್ರೀ ಬಸವರಾಜ ಪಾಟೀಲ ಅಟ್ಟೂರ್(ಸಣ್ಣ ಕೈಗಾರಿಕೆಗಳ ಮಂತ್ರಿ): ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಶಾಸಕರು ಹೇಳಿದ ಪ್ರಕಾರವಾಗಿ ಲಿಖಿತ ರೂಪದಲ್ಲಿ ಉತ್ತರವನ್ನು ಒದಗಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಸಣ್ಣಪ್ರಮಾಣದ ಕೈಗಾರಿಕಾ ಘಟಕಗಳು ಹೆಚ್ಚಿನ ಪ್ರಮಾಣದಲ್ಲಿ ಬರುತ್ತವೆ ಎನ್ನುವ ಉದ್ದೇಶ ಇಟ್ಟುಕೊಂಡು ನಮ್ಮ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಿದೆ. ಅದರ ಪ್ರಕಾರ ಅವರು ತಿಳಿಸಿದಂತೆ ನಾನು ನೇರವಾಗಿ ಉತ್ತರ ಕೊಡುವುದಕ್ಕೆ ಹೊರಟಿದ್ದೇನೆ. ಎಷ್ಟು ಅರ್ಜಿಗಳು ಬಂದಿದ್ದವು, ಯಾವ್ಯಾವ ಕೈಗಾರಿಕೆಗಳಿಗೆ ತಾವು ಸಬ್ಸಿಡಿ ಕೊಟ್ಟಿದ್ದೀರಿ ಎಂದು ಕೇಳಿದ್ದೀರಿ. ಈಗಾಗಲೇ ಉತ್ತರ ಕೊಟ್ಟಿರುವ ಪ್ರಕಾರ ನಾವು 20 ಹೊಸ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡುವ ಘೋಷಣೆಯನ್ನು ಮಾಡಿದ್ದೆವು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸಬ್ಸಿಡಿ ಕೇಳಿ ಒಟ್ಟು ಎಷ್ಟು ಅರ್ಜಿಗಳು ಬಂದಿದ್ದವು?

ಶ್ರೀ ಬಸವರಾಜ ಪಾಟೀಲ್ ಅಟ್ಟೂರು: ರಾಜ್ಯದಲ್ಲಿ ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಬೆಂಗಳೂರು ನಗರವನ್ನು ಹೊರತುಪಡಿಸಿ ಕರ್ನಾಟಕದ ಎಲ್ಲ ಕಡೆ ಸಹಿತ ಸಬ್ಸಿಡಿಯನ್ನು ಕೈಗಾರಿಕೆಗಳಿಗೆ ಕೊಡುವುದಕ್ಕೆ ಕೆಲಸ

ಮಾಡುತ್ತಿದ್ದೇವೆ. ಎರಡನೆಯದಾಗಿ ಈಗಾಗಲೇ ಹೊಸದಾಗಿ ಅರ್ಜಿಗಳು ಬಂದಿರುವ ಬಗ್ಗೆ ಪೂರ್ಣಪ್ರಮಾಣದ ಮಾಹಿತಿ ಇಲ್ಲ. ನನಗೆ ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ ಸುಮಾರು 20 ಹೊಸ ಕೈಗಾರಿಕೆಗಳಿಗೆ ಕೊಟ್ಟಿದ್ದು, ಸಬ್ಸಿಡಿ ಕೊಡಬೇಕೆಂದು ಬಹಳ ದಿವಸಗಳಿಂದ ಅವರ ಬೇಡಿಕೆ ಇತ್ತು. ಉದಾಹರಣೆಗೆ ಪೌಲ್ಟ್ರಿ ಫಾರಂ ಇದೆ. ಇಲ್ಲಿ ಪಟ್ಟಿ ಇದೆ, ಬೇಕಾದರೆ ಓದಿ ಹೇಳುತ್ತೇನೆ.

ಅಧ್ಯಕ್ಷರು: ಬೇಡ, ವೇಳೆ ಜಾಸ್ತಿಯಾಗುತ್ತದೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: 20 ಘಟಕಗಳಿಗೆ ಸಬ್ಸಿಡಿ ಕೊಟ್ಟಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೇ, ಬೇರೆಬೇರೆ ಕೈಗಾರಿಕೋದ್ಯಮಿಗಳು ಅವರಿಗೆ ಮನವಿಯನ್ನು ಮಾಡಿಕೊಂಡಿದ್ದರು. ಅವರು ಆ ಮನವಿಗಳಲ್ಲಿ 20 ಕೈಗಾರಿಕೆಗಳಿಗೆ ಮಾತ್ರ ಸಬ್ಸಿಡಿ ಕೊಡುವುದಾಗಿ ಹೇಳಿ ಪಟ್ಟಿಯನ್ನು ಕೊಟ್ಟಿದ್ದಾರೆ. ಇವುಗಳಿಗೆ ಮಾತ್ರ ಸಬ್ಸಿಡಿ ಕೊಡುವುದಕ್ಕೆ ಮಾನ್ಯತೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಕೇವಲ 20ಕ್ಕೆ ಮಾತ್ರ ಕೊಟ್ಟಿದ್ದಾರೆ. ಒಟ್ಟು ಎಷ್ಟು ಮನವಿಗಳು ಇದ್ದವು ಎಂಬುದನ್ನು ಹೇಳಬೇಕೆಂದು ಅವರನ್ನು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು: ಮನವಿಗಳು ಎಷ್ಟು ಬಂದಿದ್ದವು? ನೀವು ಪುರಸ್ಕಾರ ಮಾಡಿದ್ದು 20. ಈಗ ಮಾಹಿತಿ ಇಲ್ಲವೇನು?

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: ಇವತ್ತು ನನ್ನ ಹತ್ತಿರ ಮಾಹಿತಿ ಇಲ್ಲ. ಬೇಕಾದರೆ ನಾನು ಕೊಡುತ್ತೇನೆ. ಸಬ್ಸಿಡಿ ಕೊಡದೆ ಇರುವ ಘಟಕಗಳ ಬಗ್ಗೆ ಕೂಡ ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ನೀವು ಒಂದು ಕೆಲಸ ಮಾಡಿ. ನಿಮ್ಮ ಇಲಾಖೆಯ ಬೇಡಿಕೆಗಳಿಗೆ ಉತ್ತರ ಕೊಡುವಾಗ ಇದರ ಬಗ್ಗೆ ಹೇಳಿ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು: ಆಗಬಹುದು. 71 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ನೀವು ಕೊಟ್ಟಿಲ್ಲವೆಂದು ಹೇಳಿ ಅದರ ಬಗ್ಗೆ ಕೇಳಿದ್ದಾರೆ. ತಮಗೆ ಗೊತ್ತಿರಬಹುದು, ಬಹಳ ವರ್ಷಗಳಿಂದ ಸಣ್ಣ ಕೈಗಾರಿಕಾ ಘಟಕಗಳಿಗೆ ಸಬ್ಸಿಡಿ ಕೊಡಬೇಕಾದದ್ದು ಸರ್ಕಾರದಲ್ಲಿ ನಿಂತುಹೋಗಿತ್ತು. ಈಗ ನಾವು ಬಂದ ಮೇಲೆ ಸುಮಾರು 267 ಕೋಟಿ ರೂಪಾಯಿಗಳಲ್ಲಿ ಈಗಾಗಲೇ 230 ಕೋಟಿ ರೂಪಾಯಿಗಳಷ್ಟು ಸಬ್ಸಿಡಿಯನ್ನು ಕೊಟ್ಟಿದ್ದು ಇದು ನಮ್ಮ ರಾಜ್ಯದ ಇತಿಹಾಸದಲ್ಲೆ ಮೊದಲನೇ ದಾಖಲೆ ಅಲ್ಲದೇ ರಾಷ್ಟ್ರೀಯದ ದಾಖಲೆ ಕೂಡ ಆಗಿದೆ. ನಮ್ಮ ಸಬ್ಸಿಡಿ ಕೊಡುವ ನೀತಿಯನ್ನು ನಾವು ಬಹಳ ಚೆನ್ನಾಗಿ ಮಾಡಿದ್ದೇವೆ. ಮತ್ತು ನೇರವಾಗಿ ಅವರ ಅಕೌಂಟ್ಸ್‌ಗೆ ಜಮಾ ಆಗುವಂಥ ರೀತಿಯಲ್ಲಿ ಯಾರು ಕೈಗಾರಿಕಾ ಉದ್ದಿಮೆದಾರರು

ಇದ್ದಾರೆ ಅವರಿಗೆ ತೊಂದರೆ ಆಗಬಾರದು ಎಂದು, ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕು ಎನ್ನತಕ್ಕಂಥ ತೀರ್ಮಾನವನ್ನು ಇಟ್ಟುಕೊಂಡು ಇವತ್ತು ನಮ್ಮ ರಾಜ್ಯದಲ್ಲಿ ಹೊಸ ಮಾದರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದು 267 ಕೋಟಿ ರೂಪಾಯಿಗಳಲ್ಲಿ ಸುಮಾರು 230 ಕೋಟಿ ರೂಪಾಯಿಗಳ ಹಣವನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಮತ್ತು ಬಜೆಟ್‌ನಲ್ಲಿ ಕೊಟ್ಟಂಥ 25 ಕೋಟಿ ರೂಪಾಯಿಗಳಲ್ಲಿ 23.50 ಕೋಟಿ ರೂಪಾಯಿಗಳನ್ನು ಸಹಿತ ಸಬ್ಸಿಡಿ ಮುಖಾಂತರ ನಮ್ಮ ಕೈಗಾರಿಕೆ ಉದ್ದಿಮೆದಾರರಿಗೆ ಕೊಡುತ್ತಿದ್ದೇವೆ. ಒಟ್ಟು ಇವತ್ತಿನವರೆಗೆ 253 ಕೋಟಿ ರೂಪಾಯಿಗಳನ್ನು ಈಗಾಗಲೇ ಹಣ ಬಿಡುಗಡೆ ಮಾಡಿದ್ದೇವೆ. 71ಕೋಟಿ ರೂಪಾಯಿಗೆ ಈಗಾಗಲೇ ಫೈನಾನ್ಸ್ ಡಿಪಾರ್ಟಮೆಂಟ್‌ಗೆ ಬರೆದಿದ್ದೇವೆ. ಅದು ಬಂದ ತಕ್ಷಣ ಪೂರ್ಣಪ್ರಮಾಣದ ಸಬ್ಸಿಡಿಯನ್ನು ಕೊಡುವಂಥ ಪ್ರಯತ್ನವನ್ನು ಮಾಡಲಾಗುತ್ತದೆ.

11.50 ಎ.ಎಂ

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ): ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನ ಬಾಕಿ ಸುಮಾರು 2.96 ಕೋಟಿ ಇದೆಯೆಂದು ಉತ್ತರವನ್ನು ಕೊಟ್ಟಿದ್ದಾರೆ. ಮತ್ತು ಮುಂದೆ, 1999-2000ದಲ್ಲಿ ಕೆಲವೊಂದು ಘಟಕಗಳಿಗೆ ಬಿಡುಗಡೆ ಮಾಡಲು ಪ್ರಯತ್ನ ಮಾಡಲಾಗುವುದು ಎಂದೂ ಹೇಳಿದ್ದಾರೆ. ನನ್ನ ನೋವು ಏನೆಂದರೆ, ಅನೇಕ ತೊಂದರೆಗಳಿಂದ, ಮುಕ್ತ ಮಾರುಕಟ್ಟೆಯ ವ್ಯವಸ್ಥೆಯ ಕಾರಣದಿಂದಾಗಿ ಮತ್ತು ಇನ್ನೂ ಅನೇಕ ಕಾರಣಗಳಿಂದಾಗಿ, ಇವತ್ತು ಕೈಗಾರಿಕೆಗಳವರು ತಮ್ಮ ಬಾಗಿಲನ್ನು ಹಾಕುತ್ತಾ ಇದ್ದಾರೆ, ನಮಗೆಲ್ಲಾ ಗೊತ್ತಿದೆ. ಇವತ್ತು ಸ್ವದೇಶಿ ಕೈಗಾರಿಕೆಗಳು, ಸಣ್ಣಪ್ರಮಾಣದ ಕೈಗಾರಿಕೆಗಳು ಬಾಗಿಲು ಹಾಕುತ್ತಿವೆ. ಅವರಿಗೆ ನಾವು ಸಬ್ಸಿಡಿಯನ್ನು 3 ವರ್ಷ, 5ವರ್ಷ ವಿಳಂಬ ಮಾಡಿಕೊಟ್ಟರೆ, ಅವು ಹೇಗೆ ಉಳಿದುಕೊಳ್ಳಬೇಕು? ಡಿ.ಐ.ಸಿ.ಗಳು ಮತ್ತು ಹಣಕಾಸಿನ ಸಂಸ್ಥೆಗಳೇನಿವೆ, ಇವರಲ್ಲಿ ಕೋ ಆರ್ಡಿನೇಷನ್ ಇಲ್ಲ. ಅಲ್ಲಿ ಕಾಗದಪತ್ರಗಳು ಬೇಗ ಬೇಗ ಮೂವ್ ಆಗುವುದಿಲ್ಲ. ಈ ರೀತಿ ಅನೇಕ ಗೊಂದಲ ಇದೆ. ಜೊತೆಗೆ, ಉತ್ತರ ಕನ್ನಡ ಜಿಲ್ಲೆಯಲ್ಲಿ 2.96 ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕು. ಈ ವರ್ಷದ ಅವಧಿಯಲ್ಲೇ ಬಿಡುಗಡೆ ಮಾಡಬೇಕೆಂದು ಸರ್ಕಾರದ ಮೇಲೆ ನಮ್ಮ ಒತ್ತಾಯ ಇದೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ನಾವು ಈಗಾಗಲೇ ರಾಜ್ಯದಲ್ಲಿ ಈ ನಿಟ್ಟಿನಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಸಬ್ಸಿಡಿ ಕೊಡುವುದಾಗಲೀ ಮತ್ತು ಸಾಲ ಕೊಡುವುದಾಗಲೀ ನಾವು ನೀತಿಯನ್ನು ಬಹಳ ಸರಳೀಕರಣಗೊಳಿಸಿಕೊಂಡು, ಉತ್ತೇಜನ ಕೊಡುವಂಥ ದಿಕ್ಕಿನಲ್ಲಿ

ನಮ್ಮ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಸಾಕಷ್ಟು ಕೆಲಸಗಳನ್ನು ಮಾಡುತ್ತಾ ಇದ್ದೇವೆ. ನಾನು ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವತ್ತು ನಾವು ಇಡೀ ರಾಷ್ಟ್ರದಲ್ಲಿಯೇ ಒಂದು ಇತಿಹಾಸ ದಾಖಲೆ ಮಾಡಿದಂಥ ಘಟನೆ, ಸಬ್ಸಿಡಿ ಬಹಳ ವರ್ಷಗಳಿಂದ ಇದ್ದಂತದ್ದು. ಇದನ್ನು ಕೊಡುವುದರ ಮುಖಾಂತರವಾಗಿ, ಹೊಸ ಕೈಗಾರಿಕೆಗಳಿಗೂ ಜೊತೆಯಲ್ಲಿಯೇ ಕೊಡುವಂಥ ಕೆಲಸವನ್ನು ನಾವು ಮಾಡುತ್ತಾ ಇದ್ದೇವೆ. ಎರಡನೆಯದು ಇವತ್ತು ಸನ್ಮಾನ್ಯ ಶಾಸಕರು ಕಾರವಾರ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎನ್ನುವಂಥ ಪ್ರಶ್ನೆ ಕೇಳಿದ್ದಾರೆ. ಒಟ್ಟು 11 ಕೋಟಿ ರೂಪಾಯಿಗಳು ಬಾಕಿ ಇದ್ದಂಥ ಸಬ್ಸಿಡಿಯಲ್ಲಿ, ನಾವು ಈಗಾಗಲೇ ಡಿಸೆಂಬರ್ ಅಂತ್ಯದೊಳಗೆ 88 ಕೋಟಿ ರೂಪಾಯಿಗಳನ್ನು ಕಾರವಾರ ಜಿಲ್ಲೆಗೆ ಬಿಡುಗಡೆ ಮಾಡಿದ್ದೇವೆ. ಇನ್ನೂ ಎರಡು ಕೋಟಿ 90 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ನಾವು ಹಣಕಾಸಿನ ಇಲಾಖೆಯವರನ್ನು ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಕೇಳಿದ್ದೇವೆ. ಅದು ಬಂದತಕ್ಷಣ, ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಡಾ ಎಂ.ಪಿ.ಕರ್ಕಿ: ಈಗ ತಾವು ಎಲ್ಲಿಯತನಕ ಅರ್ಜಿಯನ್ನು ವಿಲೇವಾರಿ ಮಾಡಿದ್ದೀರಾ? ಯಾವ ತಾರೀಖಿನವರೆಗೆ, ಡಿಸೆಂಬರ್ ಅಥವಾ ಜನವರಿಯೇ ಅಥವಾ ಫೆಬ್ರುವರಿ 1999, ಯಾವ ತಾರೀಖಿನವರೆಗಿನ ಅರ್ಜಿಯನ್ನು ವಿಲೇವಾರಿ ಮಾಡಿ ಸಬ್ಸಿಡಿ ಕೊಟ್ಟಿದ್ದೀರಿ? ಒಂದು ಕಟ್‌ಆಫ್ ಡೇಟ್, ಎಲ್ಲಿಯತನಕ ನೀವು ಸಬ್ಸಿಡಿ ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: 1-4-96ರ ವರೆಗಿನ ಅರ್ಹ ಅರ್ಜಿಗಳಿಗೆ ನಾವು ಸಬ್ಸಿಡಿಯನ್ನು ಕೊಡುತ್ತಾ ಇದ್ದೇವೆ. ಮತ್ತು ಮಾರ್ಚ್ 1998ರ ವರೆಗೆ 50 ಪರ್ಸೆಂಟ್ ಸಬ್ಸಿಡಿ ಕೊಡಲಾಗಿದೆ. ಡಿಸೆಂಬರ್ 1998ರ ವರೆಗೆ 100ಪರ್ಸೆಂಟ್ ಸಬ್ಸಿಡಿ ಕೊಡಲಾಗಿದೆ.

ಬಾದಾಮಿಗೆ ಕುಡಿಯುವ ನೀರಿನ ಯೋಜನೆಯ ಅಂದಾಜು.

323(2122)

ಶ್ರೀ ಚಿಮ್ಮನಕಟ್ಟಿ ಬಾಲಪ್ಪ ಭೀಮಪ್ಪ (ಬಾದಾಮಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ಪಟ್ಟಣದ ಶಾಶ್ವತ ಕುಡಿಯುವ ನೀರಿನ ಯೋಜನೆಯ ಅಂದಾಜು ವೆಚ್ಚ ಎಷ್ಟು?